# ಸ್ವಾತಂತ್ರ್ಯ 3D ನೋಟ

## ಮಕ್ಕಳಿಗೆ ಬಂತೆ, ಹೆಣ್ಣುಮಕ್ಕಳಿಗೆ ಬಂತೆ, ದೀನ ದುರ್ಬಲರ ಪಾಲಿಗೆ ಬಂತೆ...



ರಾಜಕಾರಣದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯವನ್ನು ವ್ಯಾಖ್ಯಾನಿಸಲಾಗುತ್ತದೆ. ಆದರೆ, ಸ್ವಾತಂತ್ರ್ಯದ ನಿಜವಾದ ಸಾರ್ಥಕತೆ ಇರುವುದು ನಮ್ಮನ್ನು ಯಾರು ಆಳುತ್ತಿದ್ದಾರೆ ಎನ್ನುವುದರಲ್ಲಲ್ಲ; ಆ ಆಡಳಿತದಲ್ಲಿ ಸಮಾಜದ ಅಸಹಾಯಕರು ಹಾಗೂ ದೀನ ದಲಿತರ ಸ್ಥಿತಿ ಹೇಗಿದೆ ಎನ್ನುವುದರಲ್ಲಿ, 1947ರಲ್ಲಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆಯಿತು. ಆದರೆ, ಆ ಸ್ವಾತಂತ್ರ್ಯದ ಅಂತರ್ಜಲ ಸಮಾಜದ ಎಲ್ಲ ವರ್ಗಗಳನ್ನು ತಲುಪಿದೆಯೆ? ಮಹಿಳೆಯರು, ದೀನ–ದಲಿತರೊಂದಿಗೆ ವೇಶ್ಯಾವಾಟಿಕೆಯ ಕೂಪಕ್ಕೆ ಸಿಲುಕಿರುವ ಅಪ್ರಾಪ್ತ ವಯಸ್ಸಿನ ಹುಡುಗಿಯರ ಹಿನ್ನೆಲೆಯಲ್ಲಿ ಈ ಹೊತ್ತಿನ ಸಾಮಾಜಿಕ ಸ್ಥಿತಿಗತಿಯನ್ನು ಅರಿಯುವ ಮೂರು ವಿಭಿನ್ನ ಬರಹಗಳು ಇಲ್ಲಿವೆ.